(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಇದು ಸಮಗ್ರವಾಗಿ ಹೌದಪ್ಪಗಳ ಪರವಾಗಿದೆ. ತಮಗೆ ನಾವು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇವೆ, ದಯಮಾಡಿ ನೆರೆಹಾವಳಿ ಬಗ್ಗೆ, ಇಲ್ಲಿ ನಡೆದಿರತಕ್ಕಂಥ ಸಮಗ್ರ ಚರ್ಚೆ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ. ನಾವು ಅದಕ್ಕಾಗಿ ಕುಳಿತಿದ್ದೇವೆ ನೀವು ಅದಕ್ಕೆ ಕೊಡದೆ ಬೇರೆ ವಿಷಯ ತೆಗೆದುಕೊಳ್ಳುವುದಾದರೆ ನಾವು ಹೊರಗಡೆ ಹೋಗುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಒಪ್ಪಿಕೊಳ್ಳುತ್ತೇನೆ, ಅಜೆಂಡಾ ಪ್ರಕಾರ ಬಿಲ್ಸ್ ಇದೆ. ಆದರೆ ನೆರೆಹಾವಳಿ ಚರ್ಚೆಗೆ ನೀವು ಪ್ರಾದಾನ್ಯತೆ ಕೊಟ್ಟು -----

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ವಿಷಯದ ಬಗ್ಗೆ ಸದಸ್ಯರು ಚರ್ಚೆ ಮಾಡಲಿಕ್ಕೆ ಕರೆಯುವುದು ಅತ್ಯುತ್ತಮವಾದಂಥದ್ದು, ಆದರಂತೆ ತಾವು ಕರೆದಿದ್ದೀರಿ. ನಾವು ಕಂಠ ಶೋಷಣೆ ಮಾಡಿಕೊಂಡು ನಿರ್ದಿಷ್ಟವಾದಂಥ ಪ್ರಶ್ನೆಗಳನ್ನು ಸರ್ಕಾರದ ಮುಂದಿಟ್ಟಿದ್ದೇವೆ. ಆ ಪ್ರಶ್ನೆಗಳಿಗೆ ಅವರು ಉತ್ತರ ಕೊಡಬೇಕು. ಇಲ್ಲಾ ನಮ್ಮಲ್ಲಿ ಮಾಹಿತಿ ಇಲ್ಲವೆಂದು ಹೇಳಬೇಕು. ಇದು ಯಾವುದೂ ಆಗದೇ ಇದ್ದಾಗ ನಿಮ್ಮ ಆಫೀಸರ್ ನಿಮಗೆ ಹೇಳುತ್ತಾರೆ, ನೀವು ಮುಂದಕ್ಕೆ ಓದುಕೊಂಡು ಹೋಗುತ್ತೀರಿ. ಇದರಿಂದ ನಾವು ಚರ್ಚೆ ಮಾಡುವ ಪ್ರಯೋಜನವಿಲ್ಲ. ನೀವು ವಿಷಯದ ಮೇಲೆ ಚರ್ಚೆಮಾಡಿ ಎಂದು ಕರೆಯುತ್ತೀರಿ. ನಾವು ಯಾವುದಾದರೂ ಕಾಗೆ, ಗೂಬೆ ಕಥೆಯನ್ನು ಇಲ್ಲಿ ಹೇಳಿದ್ದೇವೆಯೇ?

ಛೇರ್ಮನ್:- ಅವರು ಆನ್ಸರ್ ಕೊಟ್ಟಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:- ನೀವು ರೂಲಿಂಗ್ ಕೊಡಿ. ನಾನು ನಿರ್ದಿಷ್ಟವಾಗಿ ರೈಸ್ ಮಾಡಿದಂಥ ಪ್ರಶ್ನೆಗೆ ಉತ್ತರ ಬಂದಿದೆಯೋ? ಬರದಿದ್ದರೆ ನೀವು ಏಕೆ ಓದಿಕೊಂಡು ಹೋಗುತ್ತೀರಿ?

ಛೇರ್ಮನ್:- ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆ ಸಬ್ಜಕ್ಟ್ ಮುಗಿಯಿತು.

ಶ್ರೀ ವಾಟಾಳ್ ನಾಗರಾಜ್:- ನೆರೆಹಾವಳಿ ಬಗ್ಗೆ ನಿಮ್ಮ ಸರ್ಕಾರಕ್ಕೆ ಆಸಕ್ತಿ ಇಲ್ಲ. ನಾವು ಒತ್ತಾಯ ಮಾಡಿ ಉತ್ತರ ಕೊಡಿ ಎಂದರೂ ಕೊಡುವುದಕ್ಕಾಗುತ್ತಿಲ್ಲ. ಆದ್ದರಿಂದ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಬಿಜೆಪಿ ಪಕ್ಷದ ಸದಸ್ಯರು, ಎಸ್.ಜೆ.ಪಿ. ಪಕ್ಷದ ಸದಸ್ಯರು ಹಾಗೂ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ಮೊದಲು ನೆರೆಹಾವಳಿಯ ಬಗ್ಗೆ ಮಾನ್ಯ ಕಂದಾಯ ಸಚಿವರು ಉತ್ತರವನ್ನು ಕೊಡಲಿ. ಆಮೇಲೆ ಸಮಯ ಇದ್ದರೆ ಬೇಕಾದರೆ ಹಿಂದೂ ಸಕ್ಷೆಶನ್ ಆಕ್ಟ್ ಬಿಲ್ ಏನಿದೆ, ಅದು ಜಾಯಿಂಟ್‌ಸೆಲೆಕ್ಟ್ ಕಮಿಟಿಯ ಮುಂದೆ ಹೋದ ಬಿಲ್. ಅದರ ಬಗ್ಗೆ ಇಲ್ಲಿ ಚರ್ಚೆ ಹೆಚ್ಚು ಆಗುವ ಹಾಗೆ ಕಾಣುವುದಿಲ್ಲ, ಆದ್ದರಿಂದ ಮೊದಲು ನೆರೆಹಾವಳಿ ಬಗ್ಗೆ ಚರ್ಚೆಗೆ ಉತ್ತರವಾಗಲಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ವಿಚಾರದಲ್ಲಿ ಹೇಳುವುದೇನೆಂದರೆ, ಇನ್ನೂ ಎರಡು ಬಿಲ್‌ಗಳು ಇವೆ. ಒಂದು ಬಿಲ್‌ನ್ನು ನಾಳೆಗೆ ತೆಗೆದುಕೊಳ್ಳೋಣ. ಇನ್ನೊಂದು ಜಾಯಿಂಟ್‌ಸೆಲೆಕ್ಟ್ ಕಮಿಟಿಗೆ ಹೋಗಿ ಬಂದಿರತಕ್ಕಂಥಾದ್ದು ಅದು 10-15 ನಿಮಿಷಗಳಲ್ಲಿ ಆಗುತ್ತದೆ.